ದಿಢೀರನೆ ಪಕ್ಷವಾತದಿಂದ ಮೂಲೆ ಸೇರಿದ್ದು, ಹಿರಿಮಗನ ಮಗಳಿಗೆ ಪೋಲಿಯೋ ಬಡಿದಿದ್ದು...
ಹೀಗೆಲ್ಲಾ.... ಮಾಯಿಲ ಅನೇಕ ಸಂಗತಿಗಳನ್ನು ಹೇಳಿಕೊಳ್ಳುತ್ತಿದ್ದ.

ಮನೆ ತುಂಬಾ ನೆಂಟರಿಷ್ಟರಿದ್ದೂ ಏಕಾಕಿತನವನ್ನು ಅನುಭವಿಸುತ್ತಿದ್ದ ಕೃಷ್ಣಪ್ಪ ಹಟ್ಟಿಯಲ್ಲಿ ನಿಂತು ಕೋಣನ ಬೆನ್ನು ಸವರುತ್ತಿದ್ದವ, ಅಪ್ಪನ ಅಳಲು, ಅದಕ್ಕೆ ದುಗ್ಗ ಹೇಳುವ ಸಾಂತ್ವನವನ್ನು ಕೇಳಿ ತನ್ನಷ್ಟಕ್ಕೆ ತಾನು ನಗುತ್ತಿದ್ದ. ಕೃಷ್ಣಪ್ಪನ ಕೈ ಯಾಂತ್ರಿಕವಾಗಿ ಕೋಣನ ಕೊರಳು ಸವರುತ್ತಿದ್ದರೂ ಅವನ ಮನಸ್ಸು ಸುತ್ತುತ್ತಿದ್ದುದು ದುಗ್ಗ ಹಾಗೂ ಮಾಯಿಲನ ಸುತ್ತವೇ.

ಅಣಿ ಕಟ್ಟಿ ಮುಗಿಸಿದ ದುಗ್ಗ, ತಕ್ಷಣ ಮಾಯಿಲನನ್ನು ಕರೆದು 'ಎಣ್ಣೆ' ಕೊಡಲು ಭಿನ್ನವಿಸಿಕೊಂಡ. ಅಲ್ಲೇ ಹೊಂಗಾರೆ ಬುಡದಲ್ಲಿ ಕುಳಿತಿದ್ದ ಜಾತಿ ಗುರಿಕಾರ ದೂಮಪ್ಪನಲ್ಲಿ ಒಂದು ಮಾತು ಕೇಳಿಕೊಂಡ ಮಾಯಿಲ ಕೊಬ್ಬರಿ ಎಣ್ಣೆಯನ್ನು ದುಗ್ಗ ನೀಡಿದ ಬಟ್ಟಲಿಗೆ ಸುರಿದೊಡನೆ ದುಗ್ಗನೊಳಗೆ ಕಲ್ಲುರ್ಟಿಯ ಆವಾಹನೆಯಾಗಿತ್ತು.

ದುಗ್ಗ, ಬಟ್ಟಲಿನಿಂದ ಎಣ್ಣೆಯನ್ನು ತಲೆ ಮೈಗೆಲ್ಲಾ ಸುರಿದುಕೊಂಡು ಆವೇಶದಿಂದ ಆರ್ಭಟಿಸುತ್ತಾ ಮೈರುದ್ದಕ್ಕಾಗಿ ಬಾವಿಯ ಬಳಿ ಓಡುವುದನ್ನು ಹಟ್ಟಿಯ ಬೈಪಾಣೆಯ ಮೇಲೆ ಕುಳಿತಿದ್ದ ಕೃಷ್ಣಪ್ಪ ಎವೆಯಿಕ್ಕದೆ ದಿಟ್ಟಿಸುತ್ತಿದ್ದ. ಬಾವಿಯ ಅಕ್ಕಪಕ್ಕದಲ್ಲಿ ನಾಲ್ಕೈದು ಕಟ್ಟುಮಸ್ತಾದ ಆಳುಗಳು ಮಾಯಿಲನ ಪೂರ್ವಯೋಜನೆಯಂತೆ ದುಗ್ಗನನ್ನು ಹಿಡಿದುಕೊಳ್ಳಲೇ ನಿಂತಿದ್ದರು.

ಮಾಯಿಲನ ಬಾವಿ ಎಂದರೆ ಅದು ಬಾವಿಯ ಹಾಗಲ್ಲ, ಅದಕ್ಕೊಂದು ದಂಡೆಯಿಲ್ಲ, ಕಟ್ಟೆಯಿಲ್ಲ, ಮಣ್ಣೂ ಇಲ್ಲ. ಅದನ್ನು ಚಿಕ್ಕ ಕೆರೆ ಎಂದೂ ಕರೆಯಬಹುದಾದಷ್ಟು ವಿಸ್ತೀರ್ಣದ ಕೆರೆಯದು. ಎಲ್ಲಾ ಕಾಲದಲ್ಲೂ ಆರಾಳು ಆಳದ ಆ ಬಾವಿಯಲ್ಲಿ ಪುಷ್ಕಳ ನೀರು, ಬಾವಿಯ ಎದುರಲ್ಲೇ ಇರುವ ಬಾಕಿ ಮಾರುಗದ್ದೆಗೆ ಸುಗ್ಗಿ. ಕೊಳಕೆಗೆ ನೀರುಣಿವುದೇ ಈ ಬಾವಿ. ಇಂತಹ ಬಾವಿ ಬಳಿ ದುಗ್ಗ ಆವೇಶದಿಂದ ನಡುಗುತ್ತಿರಬೇಕಾದರೆ ಭಯಗ್ರಸ್ತರಾದ ಆಳುಗಳು ದುಗ್ಗನನ್ನು ಬಲವಾಗಿ ತಬ್ಬಿ ಹಿಡಿದು, ಬಾವಿಯಿಂದ ಏಳೆಂಟು ಕೊಡ ನೀರು ಸೇದಿ ಸೇದಿ ದುಗ್ಗನ ಮೇಲೆ ಸುರಿದು ಮೈ ಶುದ್ಧಗೊಳಿಸಲಾರಂಭಿಸಿದ್ದರು.

ದುಗ್ಗನ ಆವೇಶ ಸಂಪೂರ್ಣ ಇಳಿದಿತ್ತು. ಬಾವಿ ಬಳಿಯಿಂದ ಬಣ್ಣ ಹಚ್ಚುವಲ್ಲಿಗೆ, ದುಗ್ಗ ಗಂಭೀರ ಹೆಜ್ಜೆಗಳನ್ನಿಡುತ್ತಾ ಬಂದಾಗ ಮಾಚು ಪಾಡ್ದನ ಹೇಳುತ್ತಿದ್ದಳು. ದುಗ್ಗ ತಾನೂ ಆಕೆಯ ಪಾಡ್ದನಕ್ಕೆ ಧ್ವನಿ ಸೇರಿಸುತ್ತಾ ಬಣ್ಣ ಹಚ್ಚಿಕೊಳ್ಳಲಾರಂಭಿಸಿದ.

ಕೈಯಲ್ಲಿ ಕನ್ನಡಿ ಹಿಡಿದು ಮುಖಕ್ಕೆ ಅರೆದಾಳ ಹಚ್ಚುತ್ತಿದ್ದ ದುಗ್ಗನ ಕೈಕಾಲು ನಡುಗುತ್ತಿರುವುದನ್ನು ಮಾಯಿಲ ತನ್ನ ಮೊಮ್ಮಕ್ಕಳಿಗೆ ತೋರಿಸುತ್ತಾ ಕಲ್ಲುರ್ಟಿಯ ಪ್ರತಾಪವನ್ನು ಇನ್ನಷ್ಟು ಬಣ್ಣ ಹಚ್ಚಿ ವರ್ಣಿಸುತ್ತಿದ್ದ. ಅಷ್ಟರಲ್ಲೇ ಮಾಯಿಲನ ಹಿರಿಯ ಮಗ ತನ್ನ ಹೆಂಡತಿಯ ಅವಲಕ್ಕಿ ಸರವನ್ನು ಪಾಡ್ದನ ಹಾಡುತ್ತಿದ್ದ ಮಾಚುವಿನ ಕೈಯಲ್ಲಿ ತಂದಿಟ್ಟು, ಕಲ್ಲುರ್ಟಿಗೆ ತೊಡಿಸಲು 'ಮನೆಯ ಆಭರಣ'ವೆಂದು ನೆನಪಿಸುತ್ತಿದ್ದ.

ದುಗ್ಗನ ಮುಖದ ಅರೆದಾಳದ ಕೆಲಸ ಮುಗಿದಿತ್ತಷ್ಟೆ. ಎದ್ದು ನಿಂತವನೆ ಭೂತದ ಕೆಂಪು ಸೀರೆ, ರವಿಕೆ ತೊಟ್ಟು, ತಲೆಗೆ ತಲೆಬೊಟ್ಟು ಇಟ್ಟು, ಕಿವಿಯಾಭರಣ ಹಾಕಿಕೊಂಡು ಮುಡಿಗೆ ಹೂ ಸಿಂಗಾರದ ಅಲಂಕಾರಕ್ಕೆ ಸಿದ್ಧನಾದ. ಮಾಚು ಆತನ ಸೀರೆಯ ನೆರಿಗೆಗಳನ್ನು ಒಪ್ಪ ಮಾಡಬೇಕಾದರೆ ಆತನಿಗೆ ಕನಕಾಂಬರದ ಮಾಲೆ ಕಟ್ಟಿಕೊಳ್ಳುವ ಅವಸರ. ಮಾಚುವನ್ನು ಅವಸರಪಡಿಸತೊಡಗಿದ್ದ. ಮಾಚು ಆತನ ತಲೆಬೊಟ್ಟು, ಹೂ ಸಿಂಗಾರದತ್ತ ಒಮ್ಮೆ ಕೈಯಾಡಿಸಿದವಳೇ ನಂತರ ಆತನ ಕೈಗಳಿಗೆ ಕನಕಾಂಬರದ ಮಾಲೆಗಳನ್ನು ಬಿಗಿದುಬಿಟ್ಟು ಕುತ್ತಿಗೆಗೂ ಒಂದು ಮಾಲೆ ಹಾಕಿಬಿಟ್ಟಳು.